ಆ) ನೇಮಕಾತಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ ;

1) ಅನುದಾನ ಪಡೆದ ಪ್ರೌಢಶಾಲೆಗಳಿಂದ :		2) ಅನುದಾನ ಪಡೆಯದ ಪ್ರೌಢಶಾಲೆಗಳಿಂದ :	
1981-82ನೇ ಸಾಲಿನಲ್ಲಿ	15	1981-82ನೇ ಸಾಲಿನಲ್ಲಿ	2
1982-83 "	10	1982-83 "	7
1983-84 "	2	1983-84 "	ಇಲ್ಲ.

ಇ) ಈ ನೇಮಕಾತಿಯಲ್ಲಿ ಯಾವ ಅಧಿಕಾರಿಯಾಗಲಿ ತಪ್ಪು ಮಾಡಿದ್ದು ಸರ್ಕಾರದ ಗಮನಕ್ಕೆ ಬಂದರೆ ಅಂತಹವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎನ್. ಶಿವರಾವ್.— ಅನುದಾನ ಪಡೆಯುವಂಥ ಶಿಕ್ಷಣ ಸಂಸ್ಥೆಗಳಿಗೆ ತಾತ್ಕಾಲಿಕವಾಗಿ ನೇಮಕಕ್ಕೆ ಅನುಮೋದನೆ ಉಂಟು ಎಂದು ಹೇಳಿದ್ದೀರಿ. ಹೀಗಿದ್ದರೂ ಕೆಲವು ಸಂಸ್ಥೆಗಳಿಗೆ ಕೊಟ್ಟಿಲ್ಲ. ಅವರು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ಮಂಜೂರಾತಿಗೆ ಬರೆದರೂ ಸಹ ಅಧಿಕಾರಿಗಳು ಇಡೀ ಅಕಡೆಮಿಕ್ ವರ್ಷ ಆದರೂ ಕೂಡ ಉತ್ತರವನ್ನು ಕಳುಹಿಸಿಲ್ಲ ಮತ್ತೆ ನೇಮಕಾತಿಯನ್ನು ಕೂಡ ಒಪ್ಪುವುದಿಲ್ಲ. ಆದುದರಿಂದ ಎಷ್ಟು ಅವಧಿಗೆ ನೇಮಕಾತಿಯನ್ನು ಒಪ್ಪುತ್ತಾರೆ ? ಈ ವಿಚಾರವನ್ನು ಶಿಕ್ಷಣ ಮಂತ್ರಿಗಳು ಹೇಳಬೇಕು ?

ಶ್ರೀ ಬಿ. ರಾಚಯ್ಯ.— ಮೂರು ವರ್ಷದ ಅವಧಿಗೆ ಕೊಟ್ಟಿದ್ದೇವೆ. ಅದನ್ನು ಈ ವರ್ಷದಲ್ಲಿ ಮುಂದುವರಿಸಿದ್ದೇವೆ.

ಶ್ರೀ ಎನ್. ಶಿವರಾವ್.— ಅಧ್ಯಾಪಕರ ಹಂಗಾಮಿ ನೇಮಕಾತಿಗೆ ಈ ನಿಯಮ ಒಳಪಡುತ್ತದೆಯೇ ಅಥವಾ ಬೇರೆ ಬೇರೆ ನೇಮಕಾತಿಗೂ ಅವಕಾಶವಿದೆಯೇ ಎಂಬುದನ್ನು ಹೇಳಬೇಕು.

ಶ್ರೀ ಬಿ. ರಾಚಯ್ಯ.— ಖಾಸಗಿ ಶಾಲೆಗಳವರು ನಿಯಮಾವಳಿ ಪ್ರಕಾರ ನೇಮಿಸಿಕೊಂಡ ಕಾಲದಲ್ಲಿ ಆ ಅಧಿಕಾರಿಗಳ ಒಂದು ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ.

ವಿಷಯ : ಹಟ್ಟಿನ ಹಳ್ಳಿ ಫಾರಂ ಅಭಿವೃದ್ಧಿ ಕುರಿತು

ಪ್ರಶ್ನೆ : 185(410) ಶ್ರೀ ಬಿ.ಎಸ್. ಪಾಟೀಲ್ (ಹೂವಿನ ಹಿಪ್ಪರಗಿ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಬಿಜಾಪುರ ಜಿಲ್ಲೆಯ ಹಟ್ಟಿನ ಹಳ್ಳಿಯ ಫಾರಂ ಅಭಿವೃದ್ಧಿಗೆ ರಾಷ್ಟ್ರೀಯ ಒಕ್ಕಲುತನ ಸಂಶೋಧನ ಯೋಜನೆಯ ಮೇರೆಗೆ ಜಾಗತಿಕ ಬ್ಯಾಂಕಿನಿಂದ ಎಷ್ಟು ಹಣ ಮಂಜೂರು ಆಗಿದೆ ಮತ್ತು ಯಾವಾಗ ಆಗಿದೆ ;

ಆ) ಆ ಹಣದಲ್ಲಿ ಇದುವರೆಗೆ ಎಷ್ಟು ಖರ್ಚಾಗಿದೆ ;

ಇ) ಹಟ್ಟಿನ ಹಳ್ಳಿಯಲ್ಲಿ ಒಂದು ಒಕ್ಕಲುತನ ಕಾಲೇಜು ಆಗಬೇಕೆಂದು ಆ ಭಾಗದ ಜನರ ಬಹುದಿನದ ಆಶೆ ಇದ್ದು ಅಂತಹ ಕಾಲೇಜನ್ನು ಸ್ಥಾಪಿಸಲು ಸರ್ಕಾರದವರು ಕೈ ಕೊಂಡ ಕ್ರಮವೇನು ?

ಉತ್ತರ : ಶ್ರೀ ಬಿ.ಎಲ್. ಗೌಡ (ಕೃಷಿ ಮಂತ್ರಿಗಳು) :—

ಅ) ಒಟ್ಟು 95.11 ಲಕ್ಷ ರೂಪಾಯಿ ಮಂಜೂರಾಗಿದೆ, ಅದರಲ್ಲಿ ಕೃಷಿ ಸಂಶೋಧನ ಮಂಡಲಿಯಿಂದ 79.27 ಲಕ್ಷ ರೂಪಾಯಿಗಳು ಮತ್ತು ರಾಜ್ಯ ಸರ್ಕಾರದಿಂದ 15.84 ಲಕ್ಷ ರೂ.ಗಳು ದಿನಾಂಕ 10-4-80ರಲ್ಲಿ ಮಂಜೂರಾಗಿದೆ.

ಆ) ತಾರೀಖು 30-9 83ರವರೆಗೆ ಭಾರತೀಯ ಕೃಷಿ ಸಂಶೋಧನಾ ಮಂಡಲಿಯು 38 77,925 ರೂ. ಗಳು, ಮತ್ತು ರಾಜ್ಯ ಸರ್ಕಾರದ 13,87,607 ರೂ.ಗಳು ಖರ್ಚಾಗಿದೆ. ಅಂದರೆ ಒಟ್ಟು 52,65,532 (52,65,532)ರೂ. ಗಳು ಖರ್ಚಾಗಿದೆ.

ಇ) ಹಟ್ಟಿನ ಹಳ್ಳಿಯಲ್ಲಿ ಒಕ್ಕಲುತನ ಕಾಲೇಜನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಗಮನದಲ್ಲಿಲ್ಲ.

ಶ್ರೀ ಬಿ.ಎಸ್. ಪಾಟೀಲ್.— ಈ ಒಕ್ಕಲುತನ ಸಂಶೋಧನ ಯೋಜನೆಯ ಮೇರೆಗೆ ಜಾಗತಿಕ ಬ್ಯಾಂಕಿನಿಂದ ಎಷ್ಟು ಹಣ ಮಂಜೂರಾಗಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಬಿ.ಎಲ್. ಗೌಡ.— ಜಾಗತಿಕ ಬ್ಯಾಂಕಿನಿಂದ ನಮಗೆ ನೇರವಾಗಿ ಹಣ ಬರುವುದಿಲ್ಲ. ಜಾಗತಿಕ ಬ್ಯಾಂಕ್‌ನವರು ಕೃಷಿ ಸಂಶೋಧನ ಮಂಡಲಿಗೆ ಹಣ ಕೊಡುತ್ತಾರೆ ; ಅನಂತರ ಅವರು ನಮಗೆ ಹಣ ಕೊಡುತ್ತಾರೆ. ಈ ಫಾರಂ ಅಭಿವೃದ್ಧಿಗೆ ಒಟ್ಟು 95.11 ಲಕ್ಷ ರೂಪಾಯಿಗಳು ಮಂಜೂರಾಗಿದೆ. ಇದರಲ್ಲಿ 79.27 ಲಕ್ಷ ರೂಪಾಯಿಗಳು ಕೃಷಿ ಸಂಶೋಧನ ಮಂಡಲಿಯಿಂದ ಮಂಜೂರಾಗಿದೆ.

ಶ್ರೀ ಬಿ.ಎಸ್. ಪಾಟೀಲ್.— ಈ ಫಾರಂನ ಅಭಿವೃದ್ಧಿಗೆ 5 ಕೋಟಿ ರೂಪಾಯಿಗಳು ಜಾಗತಿಕ ಬ್ಯಾಂಕ್‌ನಿಂದ ಮಂಜೂರಾಗಿದೆ ಎಂದು ನಾನು ಸಂಬಂಧಪಟ್ಟ ಅಧಿಕಾರಿಗಳಿಂದ ಕೇಳಿದ್ದೇನೆ. ಆದರೆ ಇಲ್ಲಿ ಕೇವಲ 95 ಲಕ್ಷ ರೂಪಾಯಿಗಳೆಂದು ಹೇಳುತ್ತಿದ್ದಾರೆ. ಆದ್ದರಿಂದ ಇದು ತಪ್ಪು ಅಂಕಿ ಅಂಶಗಳೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಲ್. ಗೌಡ.— ನಾನು ಕೃಷಿ ವಿಶ್ವ ವಿದ್ಯಾನಿಲಯದ ಉಪಕುಲಪತಿಗಳಿಂದ ವಿವರ ತರಿಸಿದ್ದೇನೆ. ಆದರೆ ಮಾನ್ಯ ಸದಸ್ಯರು ಇದು ಸರಿಯಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ತಮ್ಮಲ್ಲಿರುವ ವಿವರಗಳನ್ನು ಕೊಟ್ಟರೆ ನಾನು ಮತ್ತೊಮ್ಮೆ ಇದನ್ನು ವೆರಿಫೈ ಮಾಡಿಸುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್. — ಈ ಒಕ್ಕಲುತನ ಸಂಶೋಧನೆಗೆ ಕೇವಲ **350** ಎಕರೆ ಜಮೀನನ್ನು ಪಡೆದುಕೊಂಡಿದ್ದಾರೆ. ಈಗ ಅಲ್ಲಿ 4 ಜನ ಒಪ್ಪೈಯ ತಜ್ಞರಿದ್ದಾರೆ ಮತ್ತು ತಾಂತ್ರಿಕ ಸಿಬ್ಬಂದಿ ವರ್ಗದವರಿದ್ದಾರೆ, ಈ ಫಾರಂನ ಅಭಿವೃದ್ಧಿಗೆ ಇಷ್ಟೊಂದು ಹಣ ಖರ್ಚು ಮಾಡುವಾಗ ಅಲ್ಲಿ ಲಭ್ಯವಿರುವ ಇನ್ನೂ ಸಾವಿರಾರು ಎಕರೆ ಜಮೀನನ್ನು ಸರ್ಕಾರದವರು ವಶಪಡಿಸಿಕೊಂಡು ಹೆಚ್ಚಿನ ಸಂಶೋಧನೆ ಮಾಡುವ ವಿಚಾರ ಏನಾದರೂ ಇದೆಯೇ ?

ಶ್ರೀ ಬಿ.ಎಲ್. ಗೌಡ.— ಅದನ್ನು ಪರಿಶೀಲನೆ ಮಾಡಿಸುತ್ತೇನೆ.

ವಿಷಯ : ಸುಳ್ಯದ ಗುತ್ತಿಗಾರು ಸರ್ಕಾರಿ ಪ್ರೌಢ ಶಾಲೆಯು ಮಂಜೂರಾದರು ಕಟ್ಟಡ ರಚನೆ ಆದ ನಿಧಾನ.

ಪ್ರಶ್ನೆ : 187(380) ಶ್ರೀ ಬಾಕೀಲ ಹುಕ್ರಪ್ಪ (ಸುಳ್ಯ) ಮಾನ್ಯ ಶಿಕ್ಷಣ ಮಂತ್ರಿಗಳು **ಈ** ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) 1972ರಲ್ಲಿ ಸುಳ್ಯ ಕ್ಷೇತ್ರದ ಗುತ್ತಿಗಾರು ಸರ್ಕಾರಿ ಪ್ರೌಢ ಶಾಲೆಯು ಮಂಜೂರಾಗಿದ್ದು ಈವರೆವಿಗೂ ಕಟ್ಟಡ ರಚನೆಯಾಗದಿರಲು ಕಾರಣವೇನು ? ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ;

ಆ) ಸುಳ್ಯ ಕ್ಷೇತ್ರದ ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆಯ ಕಟ್ಟಡಗಳು ಹಳೆಯದಾಗಿ ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಆರ್ಥಿಕ ಮುಗ್ಗಟ್ಟಿನಿಂದ ಸಾಧ್ಯವಾಗಿರುವುದಿಲ್ಲ.

ಆ) ಈ ಬಗ್ಗೆ ವರದಿ ಕೇಳಲಾಗಿದೆ. 1984-85ರಲ್ಲಿ ಕಟ್ಟಡದ ಪುನರ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಾಕೀಲ ಹುಕ್ರಪ್ಪ.—ಸುಳ್ಯ ಕ್ಷೇತ್ರದ ಸರ್ಕಾರಿ ಶಾಲೆಯು ಹಳೆಯದಾಗಿದ್ದು ಬೀಳುವ ಸ್ಥಿತಿಯಲ್ಲಿದೆ. ಆದ್ದರಿಂದ ಈ ಒಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ.— ಇಲ್ಲಿಗೆ 1972ರಲ್ಲಿ ಪ್ರೌಢ ಶಾಲೆ ಮಂಜೂರಾಯಿತು. ಈಗ 9 ಕೊಠಡಿಗಳು ಅವಶ್ಯಕತೆ ಇದೆ. ಇದಕ್ಕಾಗಿ 12 ಸಾವಿರ ರೂಪಾಯಿಗಳ ವಂತಿಗೆಯನ್ನು ಕೊಟ್ಟಿದ್ದಾರೆ. ಶಾಲಾ ಕಟ್ಟಡ ಕಟ್ಟಲು ನಾಲ್ಕು ಎಕರೆಗೂ ಜಾಸ್ತಿ ನಿವೇಶನ ಇದಯೆಂದು ಹೇಳಿದ್ದಾರೆ. ಈ ಬಗ್ಗೆ ಅಂದಾಜು ಪಟ್ಟಿಯನ್ನು ತರಿಸಿ ಮಂಜೂರು ಮಾಡುತ್ತೇನೆ. ಇಲ್ಲಿಯವರೆಗೆ ನಿಧಾನವಾಗಿದ್ದಕ್ಕೆ ನಾನು ಕಾರಣನಲ್ಲ.

ವಿಷಯ : ಶಹಬಾದ್ ಕ್ಷೇತ್ರದ ನಾಲ್ವಾರ್ ಗ್ರಾಮದಲ್ಲಿ ನೀರಿನ ಅಭಾವ

ಪ್ರಶ್ನೆ : 187(516) ಕೆ.ಬಿ. ಶಾನಪ್ಪ (ಶಹಬಾದ್).— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಗ್ರಾಮ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಶಹಬಾದ್ ಕ್ಷೇತ್ರದ ನಾಲ್ವಾರ ಗ್ರಾಮದಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈಗಿದ್ದ ನೀರಿನ ಸರಬರಾಜು ಇಡೀ ಗ್ರಾಮಕ್ಕೆ ಸಾಲದೆ ಇದ್ದು ಬೇಸಗೆಯಲ್ಲಿ ವಾಹನಗಳ ಮುಖಾಂತರ ನೀರು ಸರಬರಾಜು ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಕೊರತೆಯನ್ನು ಪರಿಹರಿಸಲು ಸರ್ಕಾರದವರು ಯಾವುದಾದರೂ ಅಭಿವೃದ್ಧಿ ಯೋಜನೆಯನ್ನ ಕೈಗೊಳ್ಳಲು ಯೋಚಿಸಿದ್ದಾರೆಯೇ ;

ಈ) ಈ ಯೋಜನೆಗೆ ತಗಲುವ ವೆಚ್ಚವೆಷ್ಟು ಮತ್ತು ಪ್ರಸ್ತುತ ವರ್ಷದಲ್ಲಿ ಎಷ್ಟು ಹಣವನ್ನು ಅದಕ್ಕೆ ಕಾದಿರಿಸಲಾಗಿದೆ.

ಉ) ಈ ಯೋಜನೆಯನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಉತ್ತರ : ಶ್ರೀ ಅಬ್ದುಲ್‌ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.— ಅ) ಬಂದಿದೆ.

ಆ) ಬೇಸಿಗೆಯ ಕಾಲದಲ್ಲಿ ವಿಶೇಷವಾಗಿ ಸೇದುಬಾವಿಯ ಜಲ ಮಟ್ಟವು ಗಣನೀಯವಾಗಿ ಇಳಿಯುತ್ತಿರುವುದರಿಂದ ಹೆಚ್ಚಿನ ಜನ ಸಂಖ್ಯೆಯುಳ್ಳ ಈ ಗ್ರಾಮಕ್ಕೆ ಕುಡಿಯುವ ನೀರು ಸಾಲದಾಗಿದೆ. ಆದುದರಿಂದ ತಾತ್ಕಾಲಿಕ ಪರಿಹಾರವಾಗಿ ಈ ಗ್ರಾಮದ ಜನರಿಗೆ ಕುಡಿಯುವ ನೀರನ್ನು ವಾಹನಗಳ ಮುಖಾಂತರ ಸರಬರಾಜು ಮಾಡಲಾಗುತ್ತಿದೆ.